**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ**

**ಮಾದರಿ ಪ್ರಶ್ನೆಪತ್ರಿಕೆ-(1)-2025-26**

**ವಿಷಯ- ಐಚ್ಛಿಕ ಕನ್ನಡ-(16)**

ತರಗತಿ -ದ್ವಿತೀಯ ಪಿಯುಸಿ ಒಟ್ಟು ಅಂಕಗಳು-80

ಸಮಯ-3 ಗಂಟೆ ಒಟ್ಟು ಪ್ರಶ್ನೆಗಳು 48

---

**ಸೂಚನೆ**:-ವಿಭಾಗ 'ಅ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

**ಅ-ವಿಭಾಗ**

**I ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ.** **5x1-5**

1. ದೇಹದ ಅನಿತ್ಯತೆಗೆ ಚೋದ್ಯ ಪಟ್ಟವರು
   ಅ) ನೀಳಾಂಜನೆ ಆ) ಇಂದ್ರ
   ಇ) ಆದಿದೇವ ಈ) ಅಕಂಪನ
2. ಹೆಣ್ಣನ್ನು ಅಲ್ಲಗಳೆಯುವವರು
   ಅ) ಗ್ರಾಮೀಣರು ಆ) ಗಾವಿಲರು
   ಇ) ಅನಕ್ಷರಸ್ಥರು ಈ) ನಾಗರಿಕರು
3. ನಾಗಿಯ ಜಡೆಯು ಹೀಗಿತ್ತು.
   ಅ) ಹಾವಿನಂಥ ಜಡೆ ಆ) ಹೂವಿನ ಜಡೆ
   ಇ) ಉದ್ದನೆಯ ಜಡೆ ಈ) ತುಂಡು ಜಡೆ
4. ಜಲಗಾರನ ಪ್ರಕಾರ ರೈತನ ಮುಕ್ತಿಯ ಹಾದಿ ಇದು
   ಅ) ಕರ್ಮದ ದಾರಿ ಆ) ಧರ್ಮದ ದಾರಿ
   ಇ) ಗುಡಿಯ ಹಾದಿ ಈ) ನೇಗಿಲ ಗೆರೆಯ ಹಾದಿ
5. 'ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ
   ಉಳುತಿರುವ ಒಕ್ಕಲಿಗನೆಡೆಯಲ್ಲಿ ನಾನಿರುವೆ' - ಶಿವನ ಈ ಮಾತುಗಳಿಗೆ ಸಂಬಂಧಿಸಿದಂತೆ ಕೆಳಗಿನ ಈ ಹೇಳಿಕೆಯು ತಪ್ಪಾಗಿದೆ.
   ಅ) ಶಿವನು ಬೀದಿ ಗುಡಿಸುವ ಬಡವನ ಬಂಧು
   ಆ) ಶಿವನು ಉಳುವ ಒಕ್ಕಲಿಗನ ಬಂಧು
   ಇ) ಶಿವನು ದುಡಿಯುವವರ ಬಂಧು
   ಈ) ಶಿವನು ಸೋಮಾರಿಗಳ ಬಂಧು

**II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿ ಮಾಡಿ** **5x1-5**

6. 'ತಾಮರಸಖ' ಪದದ ಅರ್ಥ______
7. 'ಆಸೆ' ಪದದ ತತ್ಸಮ ರೂಪ_____
8. 'ಆಧಾರ ' ಪದದ ವಿರುದ್ಧಾರ್ಥಕ ಪದ______
9. ದ್ವಿರುಕ್ತಿಗೆ ಇದು ಉದಾಹರಣೆ________
10. 'ಎದ್ದೆದ್ದು' ಪದದ ಬಿಡಿಸಿ ಬರೆದ ರೂಪ_______

**( ಆಶಾ, ಸೂರ್ಯ, ಒಂದೊಂದು, ತಾವರೆ, ಎದ್ದು+ಎದ್ದು, ನಿರಾಧಾರ)**

**III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ** **5x1-5**

| | |
|---|---|
| 11. ಅ. ಚುಂಚು | -ಒಳಗಣ |
| ಆ. ಕಾಳು | -ಕಿಂಕರ, ಆಳು |
| ಇ. ಹೊರಗಣ | -ಕೊಕ್ಕು |
| ಈ. ಸೇವಕ | -ಕೋಪ |
| ಉ. ಸಿಡಿಮಿಡಿ | -ಧಾನ್ಯ, ಕೀಳು |
| | -ಆಳು, ಧಾನ್ಯ |

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **5x1-5**

12. ಶಿವ ಯಾರ ಜೊತೆ ಕುಣಿದನು?
13. ಯಾರಿಗೆ ಬುದ್ಧಿ ಹೇಳಿದರೆ ಫಲವಿಲ್ಲ?
14. ವಿವೇಕ ಜಲದಿಂದ ಅರ್ಜುನನು ಏನನ್ನು ತೊಳೆದನು?
15. ಮಣ್ಣಿನ ಭೋಗಿ ಯಾರು?
16. ಏನನ್ನು ಕುಡಿದು ಮಂದಿಗೆ ತಲೆಕೆಟ್ಟಿದೆ?

**ಆ-ವಿಭಾಗ**

**V. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **4x2-8**

17. ಕುಡುಮಿಂಚಿನಂತೆ ಹೊಳೆದು ಮಾಯವಾಗುವ ಭೋಗ ವಿಷಯಗಳು ಯಾವುವು?
18. ಹಂದಿಯನ್ನು ಕೊಂದವರು ಯಾರು? ಅದಕ್ಕೆ ಅರ್ಜುನನ ಪ್ರತಿಕ್ರಿಯೆ ಏನು?
19. ಶಿವನ ನಾಟ್ಯಗತಿಗೆ ಬ್ರಹ್ಮನ ಶಿರ ಹಾಗೂ ಸುರರ ಶಿರೋಮಾಲೆಗಳಿಗೆ ಏನಾಯಿತು?
20. ಚಾಮರಸನು ಪ್ರಭುಲಿಂಗಲೀಲೆಯನ್ನು ನುಡಿದ ಬಗೆ ಹೇಗೆ?
21. ಹೆತ್ತವರ ಹೆಮ್ಮೆಯನ್ನು ಹೇಗೆ ಹೆಚ್ಚುಮಾಡಬೇಕು?

**VI. ಕೆಳಗಿನ ನಾಲ್ಕು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **4x3-12**

22. ನಿಚ್ಚಂ ಮೆಚ್ಚುಗೊಳ್ವಳಿಂದ್ರನ ಕೈಯೊಳ್
23. ಕೆಡೆದತ್ತಿದೆನ್ನಯೆ ಬಾಣದಿಂ
24. ಶೂಲಿಗೆ ಮೇಳವಣೆಯ ಮೃದುನಾದಂ
25. ಕೂರ್ಮೆಯ ಕುಲವಧು ಮುಖ್ಯ
26. ಹಂದಿಯೊಂದೆಡೆಗೆ ಉಪಕಾರಿ.

**VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **2x4-8**

27. ಅರ್ಜುನನು ಶಿವನನ್ನು ಪೂಜಿಸಿದ ಬಗೆ ಹೇಗೆ? ಅದರ ಪರಿಣಾಮವೇನು?
28. ಅಲ್ಲಮನು ಮಾಯೆಯ ಮೋಹವನ್ನು ನಿರಾಕರಿಸಲು ನೀಡುವ ಕಾರಣಗಳೇನು?
29. ಇಂದ್ರಿಯಗಳ ನಿಯಂತ್ರಣದ ಕುರಿತು ಸರ್ವಜ್ಞ ಏನು ಹೇಳಿದ್ದಾನೆ?
30. ಸಂಚಿಯ ಹೊನ್ನಮ್ಮನ ಆಶಯದಂತೆ ಹೊಂದಾಣಿಕೆಯ ಸಂಸಾರದಲ್ಲಿ ಗಂಡ ಮತ್ತು ಹೆಂಡತಿಯ ಪಾತ್ರವೇನು? ಚರ್ಚಿಸಿ.

**VIII. ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ** **1x4-4**

31. ನಾರೀರೂಪದ ಯಂತ್ರಂ
ಚಾರುತರಂ ನೋಡೆ ನೋಡೆ ಕರಗಿದುದೀ ಸಂ
ಸಾರದನಿತ್ಯತೆ ಮನದೊಳ್

ಬೇರೂಚಿದುದೀಗಳೆಂತಿದಂ ಕಡೆಗಣಿಪೆಂ.

32. ಕೊಲ್ವುದು ಧರ್ಮವೆ ಕಳುವುದು ನೀತಿಯೆ
ಗೆಲ್ವುದೊಳ್ಳಿತೆ ಸಜ್ಜನರ
ಒಲ್ವುದೊಳ್ಳಿತೆ ಪರಸತಿಗೆ ಪಶ್ಚಿಮ ರಂಗ
ನಾಲ್ವರು ಮೆಚ್ಚಿದೆನಲ್ಕೆ

**ಇ-ವಿಭಾಗ**

**IX. ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ 1x2-2**

33. ಪ್ರೀತಿಯ ನಾಗಸ್ವರದ ಪರಿಣಾಮ ಏನಾಯಿತು?

34. ಹೆಣ್ಣಿನ ಪ್ರೀತಿಯ ಹೆಜ್ಜೆಯ ಹಾದಿ ಎಂತಹುದು?

**X. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ 1x4-4**

35. 'ನಾಗಿಯ ಕಥೆ' ಕಥನ ಕವನದಲ್ಲಿ ನಾಗಿಯ ಸೌಂದರ್ಯವನ್ನು ಕವಿ ಹೇಗೆ ವರ್ಣಿಸುತ್ತಾನೆ.

36. 'ಯಾರು ತಪ್ಪು ಮಾಡಿದರೂ ಶಿಕ್ಷೆ ಅನುಭವಿಸಬೇಕಾದವರು ಹೆಣ್ಣುಮಕ್ಕಳೆ' ಈ ಮಾತುಗಳನ್ನು 'ನಾಗಿಯ ಕಥೆ' ಕಥನ ಕವನದ ಹಿನ್ನೆಲೆಯಲ್ಲಿ ಚರ್ಚಿಸಿ.

**ಈ-ವಿಭಾಗ**

**XI. ಕೆಳಗಿನ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ 2x2-4**

37. ಅರುಣೋದಯವು ಹೇಗೆ ಮೂಡುತ್ತಿದೆ?

38. ಜಲಗಾರನ ಪ್ರಕಾರ ಯಾವುದು ಪಂಚಪಾತ್ರೆ?

39. ತನಗೆ ಚಂದ್ರ ಮತ್ತು ಗಂಗೆಯರನ್ನು ಏಕೆ ತೊಡಿಸಿದರೆಂದು ಶಿವ ಹೇಳುತ್ತಾನೆ?

**XII. ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ 2x3-6**

40. ನೇಗಿಲ ಯೋಗಿಯು ನಾನು; ಮಣ್ಣಿನ ಭೋಗಿಯು ನಾನು!

41. ಗುಡಿಯ ನುಗ್ಗುವ ಮುನ್ನವೇ ಶಿವನ ಹೊರಗಟ್ಟಿ ನುಗ್ಗುವರು

42. ಊರ ತೋಟಿಯು ನೀನು; ಜಗದ ತೋಟಿಯು ನಾನು

**XIII. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ 1x4-4**

43. 'ಜಲಗಾರ' ನಾಟಕದ ಹುಡುಗಿಯ ಪಾತ್ರ ವಿವರಿಸುವ ಬದುಕಿನ ಚಿತ್ರಣ ಎಂಥದ್ದು? ವಿವರಿಸಿ.

44. ಜಲಗಾರ ಮತ್ತು ಶಿವನ ನಡುವಿನ ಮಾತುಕತೆಯನ್ನು ಸಂಗ್ರಹಿಸಿ ಬರೆಯಿರಿ.

**ಉ-ವಿಭಾಗ**

**XIV. ಕೆಳಗಿನ ಒಂದು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ 1x4-4**

45. ಎಮೆಯಿಕ್ಕದೆ ನೋಡುವ ನರ
ರಮರರ ಕಣ್ಗೊಳೊಳನಂಗರಾಜನ ಬಯ್ತಿ
ಟ್ಟಮರ್ದಂ ಕೊಳೆ ತಳಿದುದು ನಾ
ಭಿಮೂಳಮುಂ ಬಾಹುಮೂಳಮುಂ ಸುರವಧುವಾ

46. ನೆನೆಯದಿರಣ್ಣ ಭಾರತದೊಳಿಂಪೆರರಾರುಮನೊಂದೆ ಚಿತ್ತದಿಂ

**XV. ಕೆಳಗಿನವುಗಳಲ್ಲಿ ಒಂದಕ್ಕೆ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ. 1x4-4**

47. ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ

48. ಗೇರು ಹೂವಿನಂತೆ ಪ್ರೀತಿ ನಾಗಿಯ ಎದೆಗೆ ಲಗ್ಗೆಯಿಟ್ಟಿತು